

## ಗಿಡ ಒಂದು... ಹೂಗಳ ಬಣ್ಣ ಎರಡು!

ಈ ಗುಲಾಬಿ ಗಿಡ ಒಂದೇ ಆದರೂ ಎರಡು ಬಗೆಯ ಹೂಗಳನ್ನು ಬಿಟ್ಟು ತನ್ನತ್ತ ನೋಡುಗರನ್ನು ಆಕರ್ಷಣೆ ಮಾಡುತ್ತಿದೆ. ಒಂದೇ ಗಿಡದಲ್ಲಿ ಒಂದೇ ತೊಟ್ಟಿನಲ್ಲಿ ಬಿಳಿ ಮತ್ತು ಕಿತ್ತಳೆ ಬಣ್ಣದ ಹೂವುಗಳನ್ನು ನೋಡಬಹುದು. ಯಲ್ಲಾಪುರದ ತಾರಿಮಕ್ಕಿಯ ಮಹಾಬಲೇಶ್ವರ ಹಮ್ಮು ಪಟಗಾರರ ಹೂದೋಟದಲ್ಲಿ ಒಂದೇ ಗಿಡಕ್ಕೆ ಎರಡು ಬಣ್ಣದ ಹೂಗಳು ಅರಳಿ ನಿಂತಿವೆ. ಉತ್ತರ ಕನ್ನಡ ಜಿಲ್ಲೆ ಕಿತ್ತಳೆ ವಲಯದಲ್ಲಿ ಇರುವುದರಿಂದ ಗಿಡ ಈ ರೀತಿಯ ಹೂಗಳನ್ನು ಬಿಟ್ಟಿರಬಹುದೇನೋ!

—ಬೀರಣ್ಣ ನಾಯಕ ಮೊಗಟಾ



## ಮಿನುಗುವ ತೂಗುದೀಪ

ಇತ್ತೀಚೆಗೆ ಲಾಕ್‌ಡೌನ್ ಸಂದರ್ಭದಲ್ಲಿ ಕಲಬುರಗಿ ಜಿಲ್ಲೆಯ ಶ್ರೀಕ್ಷೇತ್ರ ನಾಲವಾರದ ಶ್ರೀಕೋರಿಸಿದ್ದೇಶ್ವರ ಮಹಾಸಂಸ್ಥಾನ ಮಠದಲ್ಲಿ ಮಠದ ಸಿಬ್ಬಂದಿಯವರು ಶ್ರೀಮಠದ ಹಳೆಯ ಕೋಣೆಯೊಂದನ್ನು ಸ್ವಚ್ಛಗೊಳಿಸುತ್ತಿದ್ದಾಗ ದೀಪಾವಳಿಯ ಆಕಾಶ ಬುಟ್ಟಿಯ ಮಾದರಿಯನ್ನು ಹೋಲುವ ಕಂಚಿನ ತೂಗುದೀಪವೊಂದು ಪತ್ತೆಯಾಯಿತು. ಇಂದಿಗೂ ಸುಸ್ಥಿತಿಯಲ್ಲಿರುವ ತನ್ನ ಹೊಳಪನ್ನು ಕಳೆದುಕೊಳ್ಳದೆ ಹೊಳೆಯುತ್ತಿರುವ ಈ ತೂಗುದೀಪವು ಶ್ರೀಕ್ಷೇತ್ರದ ಭಕ್ತರನೇಕರ ಮನಸ್ಸನ್ನು ಸೂರೆಗೊಂಡಿತು.

—ಮಹಾದೇವ ಕೆ. ಗಂವ್ಹಾರ, ನಾಲವಾರ

## ಅಪರೂಪದ ತ್ರಿಮೂರ್ತಿ

ಈ ಮೂರ್ತಿಯನ್ನು ಬಾಲಪ್ಪನಾಯಕ ಬೆಟ್ಟದ ಮೇಲೆ 1586ರಲ್ಲಿ ಸ್ಥಾಪಿಸಿದ್ದು ಕಾಲಾಂತರದಲ್ಲಿ ಬೆಟ್ಟದ ಕೆಳಭಾಗದಲ್ಲಿ ನಿರ್ಮಾಣವಾದ ದೇವಾಲಯಕ್ಕೆ ಸ್ಥಳಾಂತರಿಸಲಾಗಿದೆ. ದೇವಾಲಯ ಗರ್ಭಗುಡಿ, ನವರಂಗ ಹಾಗೂ ತೆರೆದ ಮಂಟಪ ಹೊಂದಿದೆ. ಗರ್ಭಗುಡಿಯಲ್ಲಿ ರುಕ್ಮಿಣಿ ಸತ್ಯಭಾಮ ಸಮೇತನಾದ ಸುಂದರ ವೇಣುಗೋಪಾಲನ 3 ಅಡಿ ಎತ್ತರದ ಮೂರ್ತಿ ಇದೆ. ಕೊರಳಲ್ಲಿ ಧರಿಸಿರುವ ಕಂಠಾಭರಣ ಸುಂದರವಾಗಿದ್ದು ಕದಂಬ ವೃಕ್ಷದ ಕೆಳಗೆ ಮೂರ್ತಿ ಇರುವಂತೆ ಕೆತ್ತನೆ ಇರುವುದು ವಿಶೇಷ. ದ್ವಾರದಲ್ಲಿ ಸುಂದರ ದ್ವಾರಪಾಲಕರ ಕೆತ್ತನೆ ಇದೆ. ದೇವಾಲಯಕ್ಕೆ ಸುಂದರ ರಾಜಗೋಪುರ ನಿರ್ಮಿಸಲಾಗಿದ್ದು ಇಲ್ಲಿ ವೇಣುಗೋಪಾಲನ ಚಿಕ್ಕ ಮೂರ್ತಿ ಇದೆ. ದೇವಾಲಯದ ಮುಂಭಾಗದಲ್ಲಿ ಎತ್ತರದ ದೀಪಸ್ತಂಭ ಇದ್ದು ಬಲಿಪೀಠ ಗರುಡ ಸನ್ನಿಧಿಯ ಗೂಡು ಇದೆ. ಶ್ರಾವಣ ಮಾಸದಲ್ಲಿ ಗೋಕುಲಾಷ್ಟಮಿಯ ದಿನ ಇಲ್ಲಿ ವಿಶೇಷ ಪೂಜೆ ಇರುತ್ತದೆ. ಮೂಲತಃ ಪುರಾತನ ಮೂರ್ತಿ ನಿರ್ಮಾಣವಾದ ಈ ದೇವಾಲಯ ಸಾಕಷ್ಟು ಬಾರಿ ನವೀಕರಣಗೊಂಡಿದ್ದು 1777ರಲ್ಲಿ ತಿಮ್ಮಪ್ಪನಾಯಕ ಈಗಿನ ದೇವಾಲಯವನ್ನು ನಿರ್ಮಾಣ ಮಾಡಿದ್ದು 1942ರಲ್ಲಿ ರಾಜಗೋಪುರ, ಹಜಾರಾ ಮಂಟಪ ನಿರ್ಮಾಣ ಮಾಡಿದ್ದು ಹೊಸ ರೂಪ ಪಡೆದಿದೆ.

—ಶ್ರೀನಿವಾಸ ಮೂರ್ತಿ ಎನ್. ಎಸ್.

